ಇಂದು ದಿ: 14.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಹೆಚ್ ಪಿ ಎಸ್ ವಕೀಲರಿಂದ:

ನನಗೆ ಚೆನ್ನಬಸವಪ್ಪ ಮತ್ತು ಮುದ್ದುರಾಮಣ್ಣ ಎಂಬ ಸಹೋದರರು. ನಮ್ಮ ತಂದೆ ಹೆಸರು ಮಾದಪ್ಪ. ನನ್ನ ತಂದೆ 1987ರಲ್ಲಿ ಮೃತರಾಗಿರುತ್ತಾರೆ. ತಾಯಿ ಇದ್ದಾರೆ. ನನ್ನ ಸಹೋದರರು ಬೇರೆ ಬೇರೆ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಚೆನ್ನಬಸವಣ್ಣನಿಗೆ ಶೀಲ, ಶಿವು ಮತ್ತು ಬಸವರಾಜು ಎಂಬ ಮಕ್ಕಳು. ಮುದ್ದುರಾಮಣ್ಣನಿಗೆ ಪ್ರಶಾಂತ್, ಪ್ರಜ್ವಲ್, ಸೌಭಾಗ್ಯ ಎಂಬ 3 ಮಕ್ಕಳು ಎಂದರೆ ಸರಿ. ಚೆನ್ನ ಬಸವಣ್ಣ ಮತ್ತು ಮುದ್ದುರಾಮಣ್ಣ ಅವರ ಹೆಂಡತಿ ಮಕ್ಕಳ ಜೊತೆಗೆ ಹಾಗೂ ಅಪ್ರತ್ಯೇಕ ವಾಸ ಇದ್ದಾರೆ. ನನ್ನ ಸಹೊದರರು ಕುಟುಂಬದ ಕೆಲವು ಆಸ್ತಿಗಳನ್ನು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ನನ್ನ ಸಹೋದರರು ಅವರವರ ಆಸ್ತಿಯಲ್ಲಿ ಉಳುಮೆ ಮಾಡಿಕೊಂಡು ಬಂದ ಉತ್ಪನ್ನವನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ಈ ರೀತಿಯಾಗಿ ನನ್ನಸಹೋದರರು ದಾವಾ ಆಸ್ತಿಯ ಆದಾಯವನ್ನು 10 ವರ್ಷಗಳಿಂದ ಈಚೆಗೆ ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಆದರೆ ನನ್ನ ಸಹೋದರರ ಹೆಸರಿಗೆ ಆಸ್ತಿಯ ಖಾತೆಗಳು ಇನ್ನೂ ಆಗಿಲ್ಲ. ನನ್ನ ಸಹೋದರ ದಿನಾಂಕ 01.01.1998ರಂದು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದರಂತೆ ಎಂ ಆರ್ 5/97-98ರಂತೆ ನನ್ನ ಸಹೋದರರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ.

ನಾನು ಮೊದಲು ಮೈಸೂರಿನ ಗಾಯಿತ್ರಿಪುರಂ ನಲ್ಲಿ ವಾಸ ಇದ್ದೆ, ಈಗ ಚಾಮರಾಜನಗರದ ಅರಕಲವಾಡಿಯಲ್ಲಿ ವಾಸ ಇದ್ದೇನೆ. ಸಿಂಧುವಳ್ಳಿ ನಾಗರಾಜು ಎನ್ನುವವರು ಗೊತ್ತು. ಸಿಂಧುವಳ್ಳಿ ನಾಗರಾಜು ರವರಿಗೆ ನಾನು ಮತ್ತು ಮುದ್ದುರಾಮಣ್ಣ ಸರ್ವೆ ನಂ.368 ರ ಆಸ್ತಿ ಕುರಿತಂತೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೆ ಎಂದರೆ ಇನ್ನೂ ಆಗಿಲ್ಲ ಎನ್ನುತ್ತಾರೆ. ಖರೀದಿ ಕರಾರು ಪತ್ರಕ್ಕೆ ನಾನು ಸಹಿ ಮಾಡಿದ್ದೆ. ನಂತರ ನಾಗರಾಜುರವರು ನನ್ನ ಮತ್ತು ಮುದ್ದುರಾಮಣ್ಣನ ವಿರುದ್ದ ಕ್ರಯ ಪತ್ರ ಬರೆದುಕೊಡುವಂತೆ ಒ ಎಸ್ 21/2023ಅನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯು ಡಿಕ್ರಿ ಆಗಿದೆಯೇ ಇಲ್ಲವೊ ನನಗೆ ಗೊತ್ತಿಲ್ಲ. ಆ ತೀರ್ಪನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನಾಗರಾಜುರವರಿಗೆ ನಾವು ಬರೆದುಕೊಟ್ಟ ಕ್ರಯದ ಕರಾರು ಪತ್ರವನ್ನು ತಿಳುವಳಿಕೆ ಇದ್ದೇ ಸಹಿ ಮಾಡಿದ್ದು ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು.  ಸಮಯ ನೀಡಲಾಯಿತು.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.